## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 231/**22** |

| | | |
|---|---|---|
| ಸಾಕ್ಷಿದಾರರ ಹೆಸರು | **ಪಂಕಜಾ** | |
| ಗಂಡನ ಹೆಸರು | **ಸಂದೀಪ** | ಸಾಕ್ಷಿಗೆ ದಿಃ **17.01.2023** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **35 ವರ್ಷ** | |
| ಉದ್ಯೋಗ | **ಗೃಹಿಣಿ** | ಪಿ.ಡಬ್ಲ್ಯೂ **-08** |
| ವಾಸ ಸ್ಥಳ | **ಹಾಲಿ ವಾಸ ಚಿಕ್ಕಮಂಗಳೂರು.** | ಸಿ.ಡಬ್ಲ್ಯೂ **-20** |

### ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನಾನು ಮೈಸೂರಿನ ಹೆಬ್ಬಾಳ ಏರಿಯಾದಲ್ಲಿ ಆರೋಪಿತರ ಮನೆಯಲ್ಲಿ ನೆಲ ಮಹಡಿಯಲ್ಲಿ 2021 ರಿಂದ 2022 ರ ವರೆಗೆ ಅಂದಾಜು 10 ತಿಂಗಳು ಬಾಡಿಗೆಗೆ ಇದ್ದೆವು. ಆರೋಪಿತರ ಪರಿಚಯ ಇರುತ್ತದೆ. ಆರೋಪಿತರು 1 ನೇ ಮಹಡಿಯಲ್ಲಿ ವಾಸವಾಗಿದ್ದರು, ನಂಜಮ್ಮ ಇವರು 2 ನೇ ಮಹಡಿಯಲ್ಲಿ ಒಂದು ಕೋಣೆಯಲ್ಲಿ ಇದ್ದರು, 4 ನೇ ಆರೋಪಿತಳು ಅವಳ ಮಕ್ಕಳ ಜೊತೆಗೆ ವಾಸವಾಗಿದ್ದಳು. 2 ನೇ ಆರೋಪಿತಳು ಬಾಣಂತನಕ್ಕೆ 4 ನೇ ಆರೋಪಿತಳ ಮನೆಗೆ ಬಂದಿದ್ದಳು. ಮೃತ ನಂಜಮ್ಮ ಮತ್ತು ಆರೋಪಿತರ ಸಂಬಂಧ ಹೇಗೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ, ಆರೋಪಿತರು ಮತ್ತು ಮೃತ ನಂಜಮ್ಮಳ ಮಧ್ಯೆ ಗಲಾಟೆ ಆದ ವಿಷಯ ನನಗೆ ಗೊತ್ತಿಲ್ಲ. ನಂಜಮ್ಮ ಹೇಗೆ ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಂಜಮ್ಮ ಇವರನ್ನು ಯಾರು, ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಆರೋಪಿತರ ಮತ್ತು ಮೃತ ನಂಜಮ್ಮ ಇವರ ಮಧ್ಯೆ ಮೇಲಿದ ಮೇಲೆ ಗಲಾಟೆ ಆಗುತ್ತಿತ್ತು ಎಂದರೆ ಸರಿಯಲ್ಲ. ಆರೋಪಿತರ ನಂಜಮ್ಮ ಇವರ ಮೇಲೆ ಹಲ್ಲೆ ಮಾಡಿ ಗಾಯ ಮಾಡಿದರು ಎಂದರೆ ಸರಿಯಲ್ಲ. ಮೃತ ನಂಜಮ್ಮ ಇವರು ತನ್ನ ಹೆಣ್ಣು ಮಕ್ಕಳಿಗೆ ಮನೆಯಲ್ಲಿ ಪಾಲು ಕೊಡಬೇಕು ಎಂದು ಆರೋಪಿತರ ಜೊತೆ ಜಗಳ ಮಾಡಿ ಬೈಯ್ದು, ಶಾಪ ಹಾಕುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ನಂಜಮ್ಮ ಇವರ ಯೋಗ ಕ್ಷೇಮ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನಂಜಮ್ಮ ಇವಳ ಹೆಣ್ಣು ಮಕ್ಕಳು ಬಂದು ಅವಳ ಯೋಗ ಕ್ಷೇಮ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 02.10.2021 ರಂದು ಬೆಳಿಗ್ಗೆ 9.15 ಗಂಟೆಗೆ ಆರೋಪಿತರು ನಂಜಮ್ಮ ಇವಳ ಜೊತೆ ಗಲಾಟೆ ಮಾಡಿ ಸುಮ್ಮನಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ.

ದಿಃ 03.10.2021 ರಂದು ನಾನು ಮನೆಯಲ್ಲಿ ಇದ್ದಾಗ, ಮಧ್ಯಾಹ್ನ 12.00 ಗಂಟೆಯ ಸಮಯದಲ್ಲಿ ಆರೋಪಿ ನಾಗಮ್ಮ ನನ್ನನ್ನು ಕರೆದು, ನಮ್ಮ ಅತ್ತೆ ಬಾಗಿಲು ಮುಚ್ಚಿಕೊಂಡು ಮಲಗಿದ್ದಾರೆ ಎಷ್ಟು ಕೂಗಿದರು ಬಾಗಿಲು ತೆರೆಯುತ್ತಿಲ್ಲಾ ಎಂದು ಹೇಳಿದರು ಎಂದರೆ ಸರಿ ಇದೆ. ನಂತರ ನಾವು ಮತ್ತು ಅಕ್ಕ-ಪಕ್ಕದ ಮನೆಯವರು ನಂಜಮ್ಮ ಇವರ ರೂಮ್ ಹತ್ತಿರ ಹೋಗಿದ್ದೆವು ಎಂದರೆ ಸರಿ ಇದೆ. ಆರೋಪಿತರೇ ನಂಜಮ್ಮ ಇವಳ ಕೊಲೆ ಮಾಡಿದ್ದಾರೆ ಎಂದು ಪೊಲೀಸ್ ಠಾಣೆಗೆ ಹೋದಾಗ ನಿಮಗೆ ಗೊತ್ತಾಯಿತು ಎಂದು ಕೇಳಿದ್ದಕ್ಕೆ ಸಾಕ್ಷಿಯು ನಾನು ಪೊಲೀಸ್ ಠಾಣೆಗೆ ಹೋದಾಗ ಆರೋಪಿತರು ನಂಜಮ್ಮಳ ಕೊಲೆ ಮಾಡಿದ್ದಾರೆ ಎಂದು ಪೊಲೀಸರು ನನಗೆ ಹೇಳಿದ್ದಾರೆ ಎಂದು ಹೇಳುತ್ತಾರೆ. ನಾನು ಪೊಲೀಸರ ಮುಂದೆ ನಂಜಮ್ಮ

------------------------------ಸುಮ್ಮನಾದರು ಎಂದು ಹೇಳಿಕೆ ಕೊಟ್ಟಿರುವುದಿಲ್ಲ, ಹೇಳಿಕೆಯ ಭಾಗವನ್ನು ನಿಪಿ-16 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು :- ಆರೋಪಿತರ ಪರ ವಕೀಲರಾದ ಶ್ರೀ ಎನ್.ಎನ್.ಆರ್ ರವರಿಂದಃ-</u>**

ನಂಜಮ್ಮ ಇವರಿಗೆ ಅಂದಾಜು 75 ರಿಂದ 80 ವಯಸ್ಸು ಆಗಿತ್ತು ಎಂದರೆ ಸರಿ ಇದೆ. ಪೊಲೀಸರು ನಂಜಮ್ಮ ಇವಳನ್ನು ಆರೋಪಿತರೇ ಕೊಲೆ ಮಾಡಿದ್ದಾರೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಹೇಳುವುದಕ್ಕಿಂತ ಮೊದಲು, ನನಗೆ ಯಾವುದೇ ವಿಷಯ ಗೊತ್ತಿರಲಿಲ್ಲ ಎಂದರೆ ಸರಿ ಇದೆ. ನಂಜಮ್ಮಳ ಯೋಗ ಕ್ಷೇಮ ಆರೋಪಿ ಸಿದ್ದರಾಜು ನೋಡಿಕೊಳ್ಳುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಮತ್ತು ನಂಜಮ್ಮ ಇವರ ಮಧ್ಯೆ ಒಳ್ಳೆ ಸಂಬಂಧ ಇತ್ತು ಎಂದು ನನಗೆ ಗೊತ್ತಿಲ್ಲ.

**<u>ಮರುವಿಚಾರಣೆಃ- ಇಲ್ಲ.</u>**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು